ಅನಂತಕೃಷ್ಣಶರ್ಮರಲ್ಲಿಯೂ ಕಂಡಿದ್ದೇನೆ. ನಾನು ಪ್ರಕಟಿಸಿರುವ 'ರುದ್ರನಾಟಕೋಪನ್ಯಾಸಗಳು' ಎಂಬ ಪುಸ್ತಕದ ಪಾಠಪ್ರಬಂಧಗಳನ್ನು ಓದಿದವರು ಡಿ.ಎಲ್.ಎನ್. ಅವರ ಆ ಸಾಮರ್ಥ್ಯವನ್ನು ಸುಲಭವಾಗಿ ಗುರುತಿಸಬಲ್ಲರು); ಕುಳಿತು ಬರೆದ ಬರಹಗಳಲ್ಲಿ ಆ ಶೈಲಿಗುಣವಿರುವುದು ಕುವೆಂಪು ಅವರ 'ತಪೋನಂದನ' ಮುಂತಾದ ರಚನೆಗಳ ಪ್ರಬಂಧಗಳನ್ನು ನೋಡಿದಾಗ ತಿಳಿಯುತ್ತದೆ. ಅವರು ತಕ್ಕ ಪದಗಳಿಗಾಗಿ, ವಾಕ್ಯಗಳಿಗಾಗಿ, ವಾಕ್ಯಪುಂಜಗಳಿಗಾಗಿ ಯೋಚಿಸಿ, ಚಿಂತಿಸಿ, ತಡೆದು, ತಾಳಿ, ಅಭಿವ್ಯಕ್ತಿಗೆ ತಕ್ಕ ಅಕ್ಷರಪ್ರತಿಮೆಗಳನ್ನು ಕಡೆಯುತ್ತಿದ್ದಾರೆ ಎಂದು ಅನುಭವಕ್ಕೆ ಬರುತ್ತಿತ್ತು. ಹೀಗಾಗಿ ಅವರ ವಾಗ್ವಿಲಾಸ ಬಣ್ಣಗಳನ್ನು ಬಳಸಿ ರಚಿಸಿದ ಸಮಂಜಸ ವರ್ತುಲ– ರೇಖಾವಿನ್ಯಾಸದ ರಂಗೋಲಿಯಾಗದೆ, ಬಗೆಬಗೆಯ ಹೂಗಿಡಗಳು ಮೆಲುಗಾಳಿಯ ಏಟಿಗೆ ಸೂಸಿದ ಹೂಗಳ ಹೂವಲಿಯಾಗುತ್ತಿತ್ತು. ಅವರು ವ್ಯಕ್ತವ್ಯವಿಷಯವನ್ನು ಅನುಭವಿಸಿ ಮಾತನಾಡುವ ರೀತಿಯಲ್ಲಿ ನಿವೇದಿಸುತ್ತಿದ್ದರು. ಉಚ್ಛೃಂಖಲವಾಗ್ಮಿತೆಯಿಂದ ಬೆರಗು ಹುಟ್ಟಿಸಲು ಹೋಗುತ್ತಿರಲಿಲ್ಲ. ಕೇಶಿರಾಜನ ಮಾತಿನಲ್ಲಿ ಹೇಳುವುದಾದರೆ, ಅವರದು 'ಜೀವವನಿಷ್ಟದಿಂದ ನಾಭಿಮೂಲದೊಳ್ ಕಹಳೆಯ ಪಾಂಗಿನ ವೊಲ್' ಮೇಲೆದ್ದು ಬರುವ ವಾಗ್ವಿಲಾಸ.

ಕುವೆಂಪು ಕಾವ್ಯಪಾಠವಿರಲಿ ಶಾಸ್ತ್ರಪಾಠವಿರಲಿ, ಪಾಠಪ್ರವಚನಗಳಿಗೆ ವಕ್ರೋಕ್ತಿ ರೂಪಕೋಕ್ತಿಗಳ ವಿಧಾನವನ್ನು ಸುಖವಾಗಿ, ಸುಲಭವಾಗಿ ಬಳಸುತ್ತಿದ್ದರು. ಅದು ಎಂದೂ ಸರಳ ಸಾಮಾನ್ಯ ಸ್ವಭಾವೋಕ್ತಿ ಆಗಿರುತ್ತಿರಲಿಲ್ಲ. ಅವರ ವ್ಯವಹಾರದ ಆಡುಮಾತು ಸಹ ಎಂದೂ 'ನಿರ್ಭಾವ ಗದ್ಯಧ್ವನಿ'ಗೆ ಇಳಿದದ್ದೇ ಇಲ್ಲ. ಕೋಲ್ಮಿಂಚಿನ ಕವಲುಗಳು ಇದ್ದಕ್ಕಿದಂತೆ ಎತ್ತೆತ್ತಲೋ ಥಟ್ಟನೆ ಹರಡಿಕೊಳ್ಳುವಂತೆ, ಹರಡಿ ಬೆಳಕು ಮೂಡಿಸುವಂತೆ, ಸಾಹಿತ್ಯಗುಣ ತುಂಬಿದ ಅರ್ಥಪುಷ್ಟಿಯ ಅಮೃತಾನ್ನದ ಪಾಥೇಯಗಳನ್ನು ತಂದು ತಂದು ಅವರು ಕೊಡಬಲ್ಲವರಾಗಿದ್ದರು. 'ಅವರ ಪಾಠಗಳು ಎಂದರೆ, ರಸಾಮೃತವಾಹಿನಿಯ ಮೇಲೆ ಚಂದ್ರನೌಕೆಯಲ್ಲಿ ಕುಳಿತು ಕರ್ಪೂರಶಲಾಕೆಯ ಹುಟ್ಟು ಹಾಕುತ್ತ ಲೀಲಾವಿಹಾರ ಮಾಡುವ ಒಂದು ಮಧುರಾನುಭವ' ಎಂದು ನಾನು ಬೇರೊಂದು ಸಂದರ್ಭದಲ್ಲಿ ಬರೆದಿದ್ದೇನೆ (ಅರಿಕೆ, ಕನ್ನಡ ಛಂದೋಮೀಮಾಂಸೆ, ಪು.VI).

ನಮ್ಮ ಪಾಠದ ತರಗತಿಗಳಲ್ಲಿ ಕುವೆಂಪು ಅವರ ಪಾಠಗಳನ್ನು ನನ್ನ ಸಹಪಾಠಿಮಿತ್ರ ಎಸ್. ನಾರಾಯಣ ಶೆಟ್ಟರು (ಸುಜನಾ) ತದೇಕಚಿತ್ತರಾಗಿ ಕುಳಿತು ಕೇಳುತ್ತಿದ್ದರೆ, ನಾನೂ ನನ್ನ ಇನ್ನೊಬ್ಬ ಸಹಪಾಠಿಮಿತ್ರ ಎಸ್.ಎಂ. ವೃಷಭೇಂದ್ರಸ್ವಾಮಿಯವರೂ ಹಾಗೆ ಹಾಗೆಯೇ ಟಿಪ್ಪಣಿ ಮಾಡಿಕೊಳ್ಳುತ್ತಿದ್ದೆವು. ಈಚಿನ ವರ್ಷಗಳಲ್ಲಿ ಈ ಟಿಪ್ಪಣಿಗಳ ವಿಷಯವನ್ನು ಒಮ್ಮೆ ಕುವೆಂಪು ಅವರಿಗೆ ತಿಳಿಸಿ, ಅವನ್ನು ಸಂಕಲಿಸಿ ಒಂದು ಪುಸ್ತಕವನ್ನೇ ಸಿದ್ಧಪಡಿಸುವ ಆಸೆಯಿದೆಯೆಂದೂ ಅವರಿಗೆ ಹೇಳಿದೆ. ಅದಕ್ಕೆ ಅವರು ಸಮ್ಮತಿಸಿದರಲ್ಲದೆ, 'You will have the benefit of the author going through it' ಎಂದು ಸಹ ಹೇಳಿ ನನ್ನನ್ನು ಪ್ರೋತ್ಸಾಹಿಸಿದರು. ಆದರೆ ಕನ್ನಡ ಅಧ್ಯಯನ ಸಂಸ್ಥೆಯ ಮತ್ತು ಸ್ವಂತದ ಬೇರೆ ಬೇರೆ ಕೆಲಸಗಳ ನಡುವೆ ಅದು ನನಗೆ ಸಾಧ್ಯವಾಗಲೇ ಇಲ್ಲ. ಈಚೆಗೆ ನನ್ನ ಮಿತ್ರ ವೃಷಭೇಂದ್ರ ಸ್ವಾಮಿ ಆ ಕೆಲಸ ಮಾಡಿರುವುದಾಗಿ ತಿಳಿದಿದೆ. ಅಲ್ಲದೆ ಅವರ ಅಪೇಕ್ಷೆಯಂತೆ ನನ್ನಲ್ಲಿದ್ದ ಟಿಪ್ಪಣಿಗಳ ಪುಸ್ತಕಗಳನ್ನೂ ಅವರಿಗೇ ನಾನು ಕೊಟ್ಟಿದ್ದೇನೆ. ಸ್ವಾಮಿ ಹೇಳುತ್ತಿದ್ದ ಮಾತು ಆಗಾಗ ನನ್ನ ನೆನಪಿಗೆ ಬರುತ್ತಿರುತ್ತದೆ. ಆ ಮಾತು ಎಂದರೆ: 'ಅಯ್ಯ ಶಾಸ್ತ್ರೀ, ನಮ್ಮ ಪ್ರೊಫೆಸರ್ ಪಾಠ ಹೊರಗೂ ಎಲ್ಲಾ ಕೇಳುವ ಹಾಗೆ ಕ್ಲಾಸಿನಾಚೆಗೂ ಮೈಕ್ ಹಾಕಿದರೆ ಹೇಗೆ?'.

**ಟಿ.ವಿ. ವೆಂಕಟಾಚಲ ಶಾಸ್ತ್ರೀ ಅವರ 'ನೆನಪುಗಳ ನೆರಳಲ್ಲಿ' (ಪ್ರ: ವಸಂತ ಪ್ರಕಾಶನ) ಕೃತಿಯ 'ಕುವೆಂಪು' ಬರಹದಿಂದ ಆಯ್ದ ಭಾಗ.**